## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| **ಎಸ್ ಸಿ :** | 270/2019 |

| | | |
|---|---|---|
| ಸಾಕ್ಷಿದಾರರ ಹೆಸರು | ಹಲ್ತಾಫ್ | |
| ತಂದೆಯ ಹೆಸರು | ಬಾಬು ಜಾನ್ | ಸಾಕ್ಷಿಗೆ ದಿಃ 14.02.2023 ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 52 ವರ್ಷ | |
| ಉದ್ಯೋಗ | ಕೂಲಿ | ಪಿ.ಡಬ್ಲ್ಯೂ-18 |
| ವಾಸ ಸ್ಥಳ | ಮೈಸೂರು | ಸಿ.ಡಬ್ಲ್ಯೂ-12 |

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಫ್ರಾಸಾ-1, 2 ಇವರ ಪರಿಚಯವಿರುತ್ತದೆ. ಆರೋಪಿಯ ಪರಿಚಯವಿರುತ್ತದೆ. ಮೃತ ರೇಷ್ಮ ಭಾನು ನನಗೆ ಪರಿಯವಿರುತ್ತಾರೆ. ಮೃತ ರೇಷ್ಮ ಭಾನು ಆರೋಪಿಯ ಹೆಂಡತಿ ಇದ್ದಳು. ಮದುವೆಯಾದ ನಂತರ ಆರೋಪಿ ಮತ್ತು ಆತನ ಹೆಂಡತಿ ರೇಷ್ಮ ಭಾನು ಇವರು ರೇಷ್ಮ ಭಾನು ರವರ ತಂದೆತಾಯಿಯ ಮನೆಯಲ್ಲಿ 10 ವರ್ಷ ಇದ್ದರು. ಅವರಿಗೆ 3 ಮಕ್ಕಳು ಇರುತ್ತಾರೆ. ಆರೋಪಿ ಈತನು ತನ್ನ ಹೆಂಡತಿ ರೇಷ್ಮ ಭಾನು ಇವರ ಜೊತೆ ಘಟನೆಕ್ಕಿಂತ 2 ವರ್ಷದ ಹಿಂದಿನಿಂದ ಜಗಳ ಮಾಡುತ್ತಿದ್ದರು. ರೇಷ್ಮ ಭಾನು ಇವಳು ಆರೋಪಿತನ ಸಹೋದರನ ಜೊತೆ ಅನೈತಿಕ ಸಂಬಂಧ ಹೊಂದಿದ್ದಾಳೆ ಎಂದು ಅನುಮಾನ ಪಟ್ಟು ಜಗಳ ಮಾಡುತ್ತಿದ್ದನು. ನಾವು ರಾಜಿ ಪಂಚಾಯಿತಿ ಮಾಡಿ 2 ರಿಂದ 3 ಸಲ ಬುದ್ಧಿವಾದ ಹೇಳಿದ್ದವು. ಆರೋಪಿ ಮತ್ತು ರೇಷ್ಮ ಭಾನು ಇವರ ಜಗಳದ ಬಗ್ಗೆ ರೇಷ್ಮ ಭಾನು ಇವರ ತಂದೆ ತಾಯಿ ಮಸೀದಿಯವರಿಗೆ ತಿಳಿಸುತ್ತೇವೆ ಎಂದು ಹೇಳಿದ್ದರು ಆದರೆ ಅ ವಿಚಾರ ನನಗೆ ಗೊತ್ತಿಲ್ಲ. ಆರೋಪಿತನು ನನ್ನ ಮುಂದೆ ಆತನ ಹೆಂಡತಿ ಅನೈತಿಕ ಸಂಬಂಧ ಇಟ್ಟು ಕೊಂಡಿದ್ದಾಳೆ ಅದಕ್ಕೆ ಅವಳನ್ನು ಕೊಲೆ ಮಾಡುತ್ತೇನೆ ಎಂದು ಹೇಳಿದ್ದನು. ಕೊನೆ

ಮಗು ನನಗೆ ಹುಟ್ಟಿರುವುದಿಲ್ಲ ಅದು ನನ್ನ ತಮ್ಮನಿಗೆ ಹುಟ್ಟಿದೆ ಎಂದು ಆರೋಪಿತನು ನನಗೆ ಹೇಳಿರುತ್ತಾನೆ. ಬೇರೆ ಮನೆ ಮಾಡಿ 3-4 ದಿವಸಕ್ಕೆ ಆರೋಪಿತನು ರೇಷ್ಮ ಭಾನು ರವರ ಕೊಲೆ ಮಾಡಿರುತ್ತಾನೆ. ಸದರಿ ಕೊಲೆ ಆರೋಪಿತನು ಮಾಡಿದ ಗಾಯತ್ರಿ ಪುರಂ ನಲ್ಲಿದ್ದ ಬಾಡಿಗೆ ಮನೆಯಲ್ಲಿ ಆಗಿರುತ್ತದೆ. ನಾನು ಕೊಲೆಯಾದ ದಿನ ಸ್ಥಳಕ್ಕೆ ಹೋಗಿದ್ದೆನು. ಶವವನ್ನು ನೋಡಿದ್ದೇನು. ಶವದ ಕತ್ತು ಕತ್ತರಿಸಿದ್ದು ಇತ್ತು. ಸದರಿ ವಿಷಯ ನಾನು ಪೊಲೀಸರಿಗೆ ಹೇಳಿರುತ್ತೇನೆ.

**ಪಾಟೀಸವಾಲು :- ಆರೋಪಿತರ ಪರ ವಕೀಲರಿಂದಃ-**

ನಮ್ಮ ಹಿರಿಯ ವಕೀಲರು ಬೇರೆ ನ್ಯಾಯಾಲಯದಲ್ಲಿ ಇದ್ದಾರೆ ಎಂದು ಕಾರಣ ಹೇಳಿ ಸಮಯ ಕೋರಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ:- ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು